***(2*** ಆರೋಪಿಯು ನ್ಯಾಯಾಂಗ ಬಂಧನದಲ್ಲಿದ್ದು, ಆಕೆಯನ್ನು ಈ ದಿನ ***Google meet*** ನಲ್ಲಿ ವೀಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಕಾರಾಗೃಹದಿಂದ ಹಾಜರುಪಡಿಸಲಾಗಿರುತ್ತದೆ. ಸಾಕ್ಷಿಯ ವಿಚಾರಣೆಯನ್ನು ದಾಖಲಿಸುವ ಮೊದಲು ಆರೋಪಿಗೆ ಸಾಕ್ಷಿ ಮಾತನಾಡುವುದು ಸರಿಯಾಗಿ ಕೇಳಿಸುತ್ತಿದೆ ಎಂದು ಖಾತ್ರಿಪಡಿಸಿಕೊಳ್ಳಲಾಯಿತು.*)*

ದಿನಾಂಕಃ 07.04.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಪಾಟೀ ಸವಾಲು: 1 ನೇ ಆರೋಪಿ ಪರವಾಗಿ ಶ್ರೀ ಹೆಚ್.ಸಿ.ಎನ್. ವಕೀಲರಿಂದಃ-**

5. ಈಗ್ಗೆ 8-10 ವರ್ಷಗಳಿಂದ ನೀವು ಫ್ರಾಸಾ.1 ರವರೊಂದಿಗೆ ವಾಸವಾಗಿಲ್ಲ ನಿಮ್ಮ ಹಿರಿಯ ಮಗನೊಂದಿಗೆ ವಾಸವಾಗಿದ್ದೀರಿ ಎಂದರೆ ಸಾಕ್ಷಿ ಒಬ್ಬಳೇ ವಾಸವಾಗಿದ್ದೇನೆ ಎನ್ನುತ್ತಾರೆ. ನಾನು ವಾಸವಾಗಿರುವ ಮನೆ ಫ್ರಾಸಾ.1 ರವರ ಮನೆಯಿಂದ 3 ಮನೆಗಳ ದೂರದಲ್ಲಿದೆ. ಹಾಗಾಗಿ ನಿಮಗೆ ಫ್ರಾಸಾ.1 ರವರ ಮನೆಯಲ್ಲಿ ನಡೆಯುತ್ತಿದ್ದ ವಿಚಾರಗಳು ಕೇಳಿಸುವುದಿಲ್ಲ ಎಂದರೆ ಸಾಕ್ಷಿ ಮೃತ ಪೂರ್ಣಿಮ ನನಗೆ ಅಲ್ಲಿ ನಡೆಯುತ್ತಿದ್ದ ವಿಚಾರಗಳನ್ನು ತಿಳಿಸುತ್ತಿದ್ದಳು ಎನ್ನುತ್ತಾರೆ. ಫ್ರಾಸಾ.1 ರವರೊಂದಿಗೆ ನಿಮಗೆ ಹೊಂದಾಣಿಕೆ ಬಾರದ ಕಾರಣ ನೀವು ಬೇರೆ ವಾಸವಾಗಿದ್ದೀರಿ ಎಂದರೆ ಸಾಕ್ಷಿ ಆತ ನೋಡಿಕೊಳ್ಳದಿದ್ದ ಮೇಲೆ ಏನು ಮಾಡಲಾಗುತ್ತದೆ ಎನ್ನುತ್ತಾರೆ. ನೀವು ಮತ್ತು ಫ್ರಾಸಾ.1 ರವರ ಕುಟುಂಬ ಪರಸ್ಪರ ಮಾತನಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ನೀವು ಫ್ರಾಸಾ.1 ರವರ ಮನೆಗೆ ಹೋಗಿ ಬರುತ್ತಿರಲಿಲ್ಲ ಎಂದರೆ ಮೊಮ್ಮಕ್ಕಳ ಸಲುವಾಗಿ

ಹೋಗಿಬರುತ್ತಿದ್ದೆನು ಎನ್ನುತ್ತಾರೆ.

6. ಫ್ರಾಸಾ.8 ರವರು ಬೇರೆ ಕಡೆ ಇದ್ದು ವಿದ್ಯಾಭ್ಯಾಸ ಮಾಡುತ್ತಿದ್ದರು ಎಂದರೆ ಸಾಕ್ಷಿ ಹಾಸ್ಟೇಲ್ ನಲ್ಲಿದ್ದಳು ಎನ್ನುತ್ತಾರೆ. ಅವರು ಹೆಚ್ಚಾಗಿ ಫ್ರಾಸಾ.1 ರವರ ಮನೆಗೆ ಬರುತ್ತಿರಲಿಲ್ಲ ಎಂದರೆ ಸರಿ. 1 ನೇ ಆರೋಪಿ ನಿಮ್ಮ ಮನೆಗೆ ಬರುತ್ತಿರಲಿಲ್ಲ ಎಂದರೆ ಸಾಕ್ಷಿ ಫ್ರಾಸಾ.1 ರವರ ಮನೆಗೆ ಬಂದು ಹೋಗಿ ಮಾಡುತ್ತಿದ್ದನು ಎನ್ನುತ್ತಾರೆ. ಪೂರ್ಣಿಮ ಮೃತಪಡುವ ಎಷ್ಟು ದಿನಗಳ ಹಿಂದೆ 1 ನೇ ಆರೋಪಿ ಫ್ರಾಸಾ.1 ರವರ ಮನೆಗೆ ಬಂದು ಹೋಗಿದ್ದನು ಎಂದು ನಿಮಗೆ ಹೇಳಲು ಆಗುವುದಿಲ್ಲ ಎಂದರೆ ಸಾಕ್ಷಿ ಆಕೆ ಮೃತಪಟ್ಟ ದಿನ ಭಾನುವಾರದಂದು ಮಧ್ಯಾಹ್ನದ ಸಮಯದಲ್ಲಿ ಬಂದು ಹೋಗಿದ್ದಾನೆ ಆದರೆ ದಿನಾಂಕ, ವರ್ಷ ನನಗೆ ಗೊತ್ತಿಲ್ಲ ಎನ್ನುತ್ತಾರೆ.

7. ಆ ದಿನ ನಮ್ಮ ಊರಿನವರ ಮದುವೆಗೆಂದು ನಾನು ಹೊಸದುರ್ಗಕ್ಕೆ ಹೋಗಿ ಅದೇ ದಿನ ವಾಪಸ್ ಬಂದಿದ್ದೇನೆ. 1 ಮತ್ತು 2 ನೇ ಆರೋಪಿತರು ಏಕಾಂತದಲ್ಲಿ ಇರುವುದನ್ನು ನೀವು ನೋಡಿದ್ದೀರಾ ಎಂದರೆ ಸಾಕ್ಷಿ 1 ನೇ ಆರೋಪಿ ಫ್ರಾಸಾ.1 ರವರ ಮನೆಗೆ ಬಂದು ಹೋಗುವುದನ್ನು ನೋಡಿದ್ದೇನೆ ಮತ್ತು ಅವರಿಬ್ಬರ ಸಂಬಂಧದ ಬಗ್ಗೆ ಪೂರ್ಣಿಮ ನನಗೆ ತಿಳಿಸಿದ್ದಳು ಎನ್ನುತ್ತಾರೆ. ಸದರಿ ವಿಚಾರವನ್ನು ಪೂರ್ಣಿಮ ನನಗೆ ತಿಳಿಸಿದ ದಿನಾಂಕ, ತಿಂಗಳು ಮತ್ತು ವರ್ಷ ನನಗೆ ಹೇಳಲಾಗುವುದಿಲ್ಲ. ಸದರಿ ವಿಚಾರವನ್ನು ಪೂರ್ಣಿಮ ಎಲ್ಲಿ ನಿಮಗೆ ತಿಳಿಸಿದ್ದಳು ಎಂದರೆ ಸಾಕ್ಷಿ ಆಕೆ ನಮ್ಮ ಮನೆಗೆ ಬಂದಾಗ ಆ ವಿಚಾರವನ್ನು

ತಿಳಿಸುತ್ತಿದ್ದಳು ಎನ್ನುತ್ತಾರೆ. ಆ ಸಮಯದಲ್ಲಿ ಯಾರು ಇದ್ದರು ಎಂದು ನಿಮಗೆ ಹೇಳಲು ಆಗುವುದಿಲ್ಲ ಎಂದರೆ ಸಾಕ್ಷಿ ನಾನು ಒಬ್ಬಳೇ ಇದ್ದಾಗ ಪೂರ್ಣಿಮ ನನಗೆ ಸದರಿ ವಿಚಾರವನ್ನು ತಿಳಿಸಿದ್ದಾಳೆ ಎನ್ನುತ್ತಾರೆ. ಆ ವಿಚಾರ ನಿಮಗೆ ತಿಳಿದ ಕೂಡಲೇ ಫ್ರಾಸಾ.1 ರವರಿಗೆ ಅದನ್ನು ತಿಳಿಸಿದ್ದೀರಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಆಗ ಆತ ಏನು ಹೇಳಿದರು ಎಂದರೆ ಸಾಕ್ಷಿ ನನ್ನ ಬಳಿ ಏನು ಹೇಳಿಲ್ಲ ಎನ್ನುತ್ತಾರೆ. 2 ನೇ ಆರೋಪಿಯ ಬಳಿ ಆ ಬಗ್ಗೆ ಕೇಳಿದ್ದೀರಾ ಎಂದರೆ ಸಾಕ್ಷಿ ಕೇಳಿದ್ದೆನು ಆದರೆ ಆಕೆ ಸದರಿ ವಿಚಾರವನ್ನು ಅಲ್ಲಗಳೆದಿದ್ದಳು ಎನ್ನುತ್ತಾರೆ. ಆರೋಪಿತರ ನಡುವೆ ಇತ್ತು ಎಂದು ಹೇಳಲಾದ ಅಕ್ರಮ ಸಂಬಂಧದ ಬಗ್ಗೆ ನೀವು ಊರಿನವರಿಗೆ ಅಥವಾ ಸಂಬಂಧಿಕರಿಗೆ ತಿಳಿಸಿ ಬುದ್ದಿ ಹೇಳಿಸಲು ಪ್ರಯತ್ನಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ.

8. ನೀವು ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿಲ್ಲ ಎಂದರೆ ಸರಿ. 1 ನೇ ಆರೋಪಿಗೆ ಮದುವೆಯಾಗಿ ಮಕ್ಕಳಿದ್ದಾರೆ ಎಂದರೆ ಸರಿ. ಆತನ ಹೆಂಡತಿ ಮಕ್ಕಳಿಗೆ ಆರೋಪಿತರ ನಡುವೆ ಇತ್ತು ಎಂದು ಹೇಳಲಾದ ಅಕ್ರಮ ಸಂಬಂಧದ ಬಗ್ಗೆ ತಿಳಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ.

9. ಪೂರ್ಣಿಮ ಶಾಲೆಗೆ ಹೋಗಿಬರುವಾಗ 1 ನೇ ಆರೋಪಿ ಆಕೆಗೆ ಹೆದರಿಸುತ್ತಿದ್ದನು ಎಂದು ಹೇಳಿದ್ದೀರಿ ಆ ರೀತಿ ಹೆದರಿಸಿದ್ದು ಯಾವಾಗ ಎಂದು ಹೇಳಲು ನಿಮಗೆ ಆಗುವುದಿಲ್ಲ ಎಂದರೆ ಸಾಕ್ಷಿ ಆಕೆ ಮೃತಪಡುವ 8 ದಿನಗಳ ಹಿಂದೆ ಎನ್ನುತ್ತಾರೆ. ಆದರೆ ಆ ರೀತಿ ಹೆದರಿಸಿದ ದಿನಾಂಕ ಮತ್ತು ಸಮಯ ನನಗೆ

ಹೇಳಲಾಗುವುದಿಲ್ಲ. ಯಾವ ಸ್ಥಳದಲ್ಲಿ ಎಂದರೆ ಸಾಕ್ಷಿ ಶಾಲೆಗೆ ಹೋಗುವಾಗ ಆದರೆ ಯಾವ ಸ್ಥಳದಲ್ಲಿ ಎಂದು ನಿರ್ದಿಷ್ಟವಾಗಿ ಎಂದು ಹೇಳಲಾಗುವುದಿಲ್ಲ. ಪೂರ್ಣಿಮಳನ್ನು ಕುರಿತು ನೀವು 1 ನೇ ಆರೋಪಿ ಯಾವ ಸ್ಥಳದಲ್ಲಿ ಆಕೆಯನ್ನು ಹೆದರಿಸಿದ್ದನು ಮತ್ತು ಆ ಸಮಯದಲ್ಲಿ ಬೇರೆ ಯಾರು ಇದ್ದರು ಎಂದು ನೀವು ಕೇಳಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ.

10. ಫ್ರಾಸಾ.1 ಮತ್ತು 1 ನೇ ಆರೋಪಿಯ ನನಡುವೆ ಸಂಬಂದ ಹೇಗಿತ್ತು ಎಂದರೆ ಸಾಕ್ಷಿ ಈ ರೀತಿಯೆಲ್ಲಾ ಆದ ಮೇಲೆ ಸಂಬಂಧ ಚೆನ್ನಾಗಿರುತ್ತದೆಯೇ ಎನ್ನುತ್ತಾರೆ. ಪೂರ್ಣಿಮ ಯಾವ ಕಾರಣಕ್ಕೆ ಮೃತಪಟ್ಟಿದ್ದಾಳೆ ಎಂದು ನಿಮಗೆ ಗೊತ್ತಿಲ್ಲ ಎಂದರೆ ಸಾಕ್ಷಿ ಮೊದಲು ಹೌದು ಎಂದು ನುಡಿದು ನಂತರ ಆರೋಪಿತರು ಆಕೆಗೆ  ಟಾರ್ಚರ್ ಕೊಟ್ಟಿದ್ದಾರೆ ಎನ್ನುತ್ತಾರೆ. ಆರೋಾಪಿತರು ಯಾವಾಗ, ಯಾವ ರೀತಿ ಟಾರ್ಚರ್ ಕೊಟ್ಟಿದ್ದರು ಎಂದು ನಿಮಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಪೂರ್ಣಿಮ ಆರೋಪಿತರು ತನಗೆ ಹಿಂಸೆ ಕೊಡುತ್ತಿದ್ದರು ಎಂದು ನನಗೆ ಹೇಳಿದ್ದಳು ಎನ್ನುತ್ತಾರೆ. ಆ ರೀತಿ ಆಕೆ ನನಗೆ ಹೇಳಿದ ಸಮಯ ಮತ್ತು  ದಿನಾಂಕವನ್ನು  ನನಗೆ ಹೇಳಲು ಆಗುವುದಿಲ್ಲ. ನೀವು ಮತ್ತು ಪೂರ್ಣಿಮ ಮಾತನಾಡುತ್ತಿರಲಿಲ್ಲ ಆಕೆ ನಿಮಗೆ ಬಳಿ ಯಾವುದೇ ವಿಚಾರವನ್ನು ಹೇಳಿಕೊಂಡಿಲ್ಲ ಎಂದರೆ ಸರಿಯಲ್ಲ.

11. ಫ್ರಾಸಾ.1 ರವರು ನಿಮ್ಮನ್ನು ಸರಿಯಾಗಿ ನೋಡಿಕೊಳ್ಳದ ಕಾರಣ ನೀವು ಆತ ಮತ್ತು ಆತನ ಮನೆಯವರೊಂದಿಗೆ ಜಗಳ

ಮಾಡಿಕೊಂಡಿದ್ದರಿಂದ ಅವರು ಯಾರು ನಿಮ್ಮೊಂದಿಗೆ ಮಾತನಾಡುತ್ತಿರಲಿಲ್ಲ ಹಾಗಾಗಿ ಪೂರ್ಣಿ ನಿಮಗೆ ಯಾವುದೇ ವಿಚಾರವನ್ನು ಹೇಳಿಲ್ಲ ಎಂದರೆ ಸರಿಯಲ್ಲ.

12. ಇದೇ ರೀತಿ ಹೇಳಬೇಕೆಂದು ಪೊಲೀಸರು ನಿಮಗೆ ಹೇಳಿಕೊಟ್ಟಿದ್ದಾರೆಯೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನೀವು ಪೂರ್ಣಿಮಳ ಶಾಲೆಗೆ ಹೋಗಿ ಆಕೆಯ ಬಗ್ಗೆ ವಿಚಾರಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. 1 ನೇ ಆರೋಪಿ ಪೂರ್ಣಿಮಳಿಗೆ ಹೆದರಿಸಿ ತೊಂದರೆ ಕೊಟ್ಟಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಆರೋಪಿತರ ನಡುವೆ ಅಕ್ರಮ ಸಂಬಂಧ ಇತ್ತು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

13. ಫ್ರಾಸಾ.1 ರವರಿಗೆ ಮದ್ಯಪಾನ ಮಾಡುವ ಅಭ್ಯಾಸ ಇದೆ ಎಂದರೆ ಸಾಕ್ಷಿ ಮೊದಲಿಗೆ ಸ್ವಲ್ಪ ಕುಡಿಯುತ್ತಿದ್ದನು ಆದರೆ ಮಗಳು ಸತ್ತ ಬಳಿಕ ಜಾಸ್ತಿ ಮಾಡಿದ್ದಾನೆ ಎನ್ನುತ್ತಾರೆ. ನಿಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ. ಮೃತಳ ಸಾವಿಗೂ 1 ನೇ ಆರೋಪಿಗೂ ಯಾವುದೇ ಸಂಬಂದವಿಲ್ಲ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ **2** ನೇ ಆರೋಪಿ ಪರವಾಗಿ **LADCS** ನ **Chief Defense counsel** ಆದ ಶ್ರೀ ಹೆಚ್.ಟಿ.ಎಸ್.ಕೆ. ವಕೀಲರಿಂದಃ</u>

14. ಪೂರ್ಣಿಮ, 2 ನೇ ಆರೋಪಿ, ಫ್ರಾಸಾ.1, ಫ್ರಾಸಾ.8 ರವರು ಹಿಂದೆ ಚೆನ್ನಾಗಿದ್ದರು ಎಂದರೆ ಸರಿ. ನೀವು ಸದರಿಯವರೊಂದಿಗೆ ಹಿಂದೆ ಒಟ್ಟಾಗಿ ವಾಸವಿದ್ದುಕೊಂಡು ಅನ್ಯೋನ್ಯವಾಗಿದ್ರಿ ಎಂದರೆ ಸರಿ. ಆ ಸಮಯದಲ್ಲಿ ನಿಮ್ಮ ಮತ್ತು 2 ನೇ ಆರೋಪಿಯ

ನಡುವೆ ಸಣ್ಣಪುಟ್ಟ ಗಲಾಟೆಗಳು ನಡೆಯುತ್ತಿದ್ದವು ಎಂದರೆ ಸರಿ. ನೀವು ಆಕೆಯೊಂದಿಗೆ ಹೆಚ್ಚಾಗಿ ಜಗಳ ಮಾಡಲು ಪ್ರಾರಂಭಿಸಿದ್ದರಿಂದ ಅವರು ಬೇರೆ ಮನೆ ಮಾಡಿಕೊಂಡರು ಎಂದರೆ ಸಾಕ್ಷಿ ಬೇರೆ ಹೋದರು ಅಷ್ಟೇ ಎನ್ನುತ್ತಾರೆ. ನೀವು, ನಿಮ್ಮ ಗಂಡ 2 ನೇ ಆರೋಪಿಗೆ ಬೈಯುವುದು, ಹೊಡೆಯುವುದು ಮಾಡುತ್ತಿದ್ದರಿಂದ ಆಕೆ ಗಂಡ, ಮಕ್ಕಳೊಂದಿಗೆ ಬೇರೆ ವಾಸವಾಗಿದ್ದಳು ಎಂದರೆ ಸರಿಯಲ್ಲ. ಆಕೆ ಬೇರೆ ಮನೆ ಮಾಡಿಕೊಂಡ ಬಳಿಕ ನಿಮ್ಮ ಮತ್ತು ಆಕೆಯ ನಡುವೆ ಮಾತುಕತೆ ಇರಲಿಲ್ಲ ಎಂದರೆ ಸರಿ. 2 ನೇ ಆರೋಪಿ ನಮ್ಮ ಮನೆಗೆ ಬಂದು ಹೋಗಿ ಮಾಡುತ್ತಿರಲಿಲ್ಲ ಆದರೆ ಫ್ರಾಸಾ.1 ಮತ್ತು ಮಕ್ಕಳು ಬಂದು ಹೋಗಿ ಮಾಡುತ್ತಿದ್ದರು ಮತ್ತು ನಾನು ಅವರ ಮನೆಗೆ ಹೋಗಿ ಬರುತ್ತಿದ್ದೆನು ಎನ್ನುತ್ತಾರೆ. 2 ನೇ ಆರೋಪಿ ಫ್ರಾಸಾ.1 ರವರು ನಿಮಗೆ ಹಣಕಾಸಿನ ಸಹಾಯವನ್ನು ಮಾಡಲು ಬಿಡುತ್ತಿರಲಿಲ್ಲವೆಂದು ನಿಮಗೆ ಆಕೆಯ ಮೇಲೆ ಸಿಟ್ಟಿತ್ತು ಎಂದರೆ ಸರಿಯಲ್ಲ.

15. ಫ್ರಾಸಾ.1 ಮತ್ತು 2 ನೇ ಆರೋಪಿ ಯು ಪೂರ್ಣಿಮಳನ್ನು ಕುರಿತು ಶಾಲೆಗೆ ಹೋಗಿ ಸರಿಯಾಗಿ ಓದುವಂತೆ ಬೈಯುವುದು ಹೊಡೆಯುವುದನ್ನು ಮಾಡುತ್ತಿದ್ದರು ಎಂದರೆ ಸಾಕ್ಷಿ ಆಕೆ ಶಾಲೆಗೆ ಸರಿಯಾಗಿ ಹೋಗುತ್ತಿದ್ದಳು, ಫ್ರಾಸಾ.1 ರವರು ಆಕೆಗೆ ಏನು ಬೈಯುತ್ತಿರಲಿಲ್ಲ, ಆದರೆ 2 ನೇ ಆರೋಪಿ ಸರಿಯಾಗಿ ಓದಿಕೋ ಎಂದು ಬೈಯುತ್ತಿದ್ದಳು ಎನ್ನುತ್ತಾರೆ. ಪೂರ್ಣಿಮ 2 ರಿಂದ 3 ದಿನ ಶಾಲೆಗೆ ಹೋಗದಿದ್ದಾಗ 2 ನೇ ಆರೋಪಿ ಮತ್ತು ಫ್ರಾಸಾ.1

ರವರು ಆಕೆಗೆ ಬೈದಿದ್ದರು ಎಂದರೆ ಸರಿಯಲ್ಲ. ಆ ಕಾರಣಕ್ಕೆ ಶಾಲೆಗೆ ಹೋಗಬಾರದೆಂಬ ಉದ್ದೇಶಕ್ಕೆ ಪೂರ್ಣಿಮ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದರೆ ಸರಿಯಲ್ಲ. ಪೂರ್ಣಿಮ ತಪ್ಪದೇ ಶಾಲೆಗೆ ಹೋಗುತ್ತಿದ್ದಳು ಆದರೆ ಆಕೆ ಸಾಯುವ ಹಿಂದಿನ ದಿನ ಹೋಗಿದ್ದಾಳೊ ಇಲ್ಲವೋ ನನಗೆ ಗೊತ್ತಿಲ್ಲ ಎನ್ನುತ್ತಾರೆ.

16. 1 ನೇ ಆರೋಪಿ ಆಗಾಗ್ಗೆ ಫ್ರಾಸಾ.1 ರವರ ಮನೆಗೆ ಬಂದು ಹೋಗುತ್ತಿದ್ದನು ಮತ್ತು 2 ನೇ ಅರೋಪಿಯೊಂದಿಗೆ ಅಕ್ರಮ ಸಂಬಂಧವನ್ನು ಇಟ್ಟುಕೊಂಡಿದ್ದನು ಎಂದು ಸುಳ್ಳು ಹೇಳಿದ್ದೀರಿ ಎಂದರೆ ಸರಿಯಲ್ಲ. 2 ನೇ ಆರೋಪಿಯೊಂದಿಗೆ ನಿಮ್ಮ ಸಂಬಂಧ ಚೆನ್ನಾಗಿ ಇರದಿದ್ದ ಕಾರಣ ಆಕೆಯ ಮೇಲಿನ ದ್ವೇಷದಿಂದ ಆ ರೀತಿ ಸುಳ್ಳು ಹೇಳಿದ್ದೀರಿ ಎಂದರೆ ಸರಿಯಲ್ಲ. ಆರೋಪಿತರ ನಡುವೆ ಅಕ್ರಮ ಸಂಬಂಧ ಇದ್ದಿದ್ದನ್ನು ಪೂರ್ಣಿಮ ನೋಡಿದ್ದಳು ಎಂದು ನ್ಯಾಯಾಲಯದಲ್ಲಿಯೇ ಮೊದಲ ಬಾರಿಗೆ ತಿಳಿಸಿದ್ದೀರಿ ಎಂದರೆ ಸರಿ. 1 ನೇ ಆರೋಪಿ ಪೂರ್ಣಿಮಳಿಗೆ ಹೆದರಿಸುತ್ತಿದ್ದ ಬಗ್ಗೆ ಸಹ ನೀವು ನ್ಯಾಯಾಲಯದಲ್ಲಿಯೇ ಮೊದಲ ಬಾರಿಗೆ ತಿಳಿಸಿದ್ದೀರಿ ಎಂದರೆ ಸರಿ.

17. ಆರೋಪಿತರು ಅಕ್ರಮ ಸಂಬಂಧವನ್ನು ಇಟ್ಟುಕೊಂಡಿದ್ದರು ಮತ್ತು ಮೃತಳಿಗೆ ಕಿರುಕುಳ ನೀಡುತ್ತಿದ್ದರು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಪೂರ್ಣಿಮ ಶಾಲೆಗೆ ಹೋಗಿಬರುವಾಗ 1 ನೇ ಆರೋಪಿ ದಾರಿಯಲ್ಲಿ ಆಕೆಗೆ ಕಿರುಕುಳ ನೀಡಿ ಶಾಲೆಗೆ ಯಾವ ರೀತಿ ಹೋಗಿ ಬರುತ್ತೀಯಾ ನೋಡುತ್ತೇನೆ ಎಂದು ಹೆದಿರಿಸಿದ್ದಾಗಿ ಸದರಿ ವಿಚಾರವನ್ನು

ಮಾರನೆ ದಿನ ಆಕೆ ಫ್ರಾಸಾ.1 ರವರಿಗೆ ತಿಳಿಸಿದ್ದಾಗಿ ಆ ವಿಷಯಕ್ಕೆ ಫ್ರಾಸಾ.1 ಮತ್ತು 2 ನೇ ಆರೋಪಿ ಗಲಾಟೆ ಮಾಡಿಕೊಂಡಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಸದರಿ ವಿಚಾರವನ್ನು ಸಹ ನೀವು ನ್ಯಾಯಾಲಯದಲ್ಲಿಯೇ ಮೊದಲ ಬಾರಿಗೆ ತಿಳಿಸಿದ್ದೀರಿ ಎಂದರೆ ಸರಿ. ಆರೋಪಿತರ ನಡುವಿನ ಅಕ್ರಮ ಸಂಬಂಧವನ್ನು ಪೂರ್ಣಿಮಳು ತಿಳಿಸಿದ್ದರಿಂದ 2 ನೇ ಆರೋಪಿ ಆಕೆಗೆ ಪ್ರತಿದಿನ ಕಿರುಕುಳ ನೀಡಿ ಏನಾದರು ಮಾಡಿಕೊಂಡು ಸಾಯಿ ಎಂದು ಹೇಳುತ್ತಿದ್ದಳು, ಆ ವಿಚಾರವನ್ನು ಪೂರ್ಣಿಮ ಮನಸ್ಸಿಗೆ ಹಚ್ಚಿಕೊಂಡು ಕೊರಗುತ್ತಿದ್ದಳು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಸದರಿ ವಿಚಾರವನ್ನು ಸಹ ನೀವು ನ್ಯಾಯಾಲಯದಲ್ಲಿಯೇ ಮೊದಲ ಬಾರಿಗೆ ತಿಳಿಸಿದ್ದೀರಿ ಎಂದರೆ ಸರಿ. ಮೃತಳ ಸಾವಿಗೂ 2 ನೇ ಆರೋಪಿಗೂ ಸಂಬಂಧವಿಲ್ಲದಿದ್ದರು ಸಹ 2 ನೇ ಆರೋಪಿಯ ಮೇಲಿನ ಸಿಟ್ಟಿನಿಂದಾಗಿ ಆಕೆಯ ವಿರುದ್ಧ ಸುಳ್ಳು ಸಾಕ್ಷ್ಯ ನುಡಿದಿದ್ದೀರಿ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ